**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.**

**ಸಿ.ಸಿ ನಂ: 218/2020**

ಪಿ.ಡಬ್ಲ್ಯೂ-2
ಸಿ.ಡಬ್ಲ್ಯೂ-4

| | | |
|---|---|---|
| ಹೆಸರು | : | ಜಗದೀಶ ಈರಪ್ಪ ಹುಬ್ಬಳ್ಳಿ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಪೋಲೀಸ್ ಪೇದೆ, ಖಾನಾಪೂರ ಪೋಲೀಸ್ ಠಾಣೆ |
| ವಾಸ | : | ಖಾನಾಪೂರ |

ದಿನಾಂಕ 29-01-2024 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ಕಳೆದ ಒಂದು ವರ್ಷದಿಂದ ನಾನು ಖಾನಾಪೂರ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕ 03.05.2019 ರಂದು ಜಾಂಬೋಟಿ ಹೊರಠಾಣೆ ವ್ಯಾಪ್ತಿಯಲ್ಲಿ ನನ್ನನ್ನು ಚಾ.ಸಾ.1 ರವರು ಗಸ್ತಿನ ಕಾರ್ಯಕ್ಕೆ ಕರೆದುಕೊಂಡು ಹೋಗಿದ್ದು ಅದರಂತೆ ಹೈವೇ ಪೆಟ್ರೋಲಿಂಗ್ ವಾಹನದಲ್ಲಿ ನಾವು ಜಾಂಬೋಟಿ ಬಸ್ ನಿಲ್ದಾಣದ ಹತ್ತಿರ ಇದ್ದಾಗ, ಸುಮಾರು 10.00 ಗಂಟೆ ಸಮಯಕ್ಕೆ ಚಾ.ಸಾ.1 ರವರಿಗೆ ಫೋನ್ ಮುಖಾಂತರ ಹಬ್ಬಾನಟ್ಟಿ ಕ್ರಾಸ್ ಬಳಿ ಅಪಘಾತವಾಗಿರುತ್ತದೆಯೆಂದು ಮಾಹಿತಿ ಬಂದಿದ್ದು, ಕೂಡಲೇ ನಾವು ಪಟ್ರೋಲಿಂಗ್ ವಾಹನದಲ್ಲಿ ಅಪಘಾತವಾದ ಸ್ಥಳಕ್ಕೆ ಹೋಗಿದ್ದು, ಸದರಿ ಸ್ಥಳದಲ್ಲಿ 407 ಗೂಡ್ಸ ವಾಹನ ನೊಂದಣೆ ಸಂಖ್ಯೆ ಕೆ.ಎ.23/4386 ವಾಹನವು ರಸ್ತೆ ಬದಿ ಮರಕ್ಕೆ ಡಿಕ್ಕಿಹೊಡೆದು ನಿಂತಿದ್ದು, ವಾಹನದ ಚಾಲಕ ವಾಹನದಿಂದ ಕೆಳಗೆ ಇಳಿದು ನಿಂತಿದ್ದು, ಆತನಿಗೆ ಹಣೆ, ಕೈ ಹಾಗೂ ಇತರೆ ಕಡೆಗೆ ತೆರಚಿದ ಗಾಯಗಳಾಗಿದ್ದು, ಆತನನ್ನುಚಾ.ಸಾ1 ವಿಚಾರಿಸಿದ್ದು, ಹೆಸರು ಮತ್ತು ವಿಳಾಸ ತಿಳಿಸಿರುತ್ತಾನೆ. ನಂತರ ಚಾ.ಸಾ.1 ರವರು ವಾಹನದ ಹಿಂಭಾಗಕ್ಕೆ ಹೋಗಿ ಪರಿಶೀಲಕಿಸಿದಾಗ ವಾಹನದ ಒಳಗೆ ರಟ್ಟಿನ ಬಾಕ್ಸಗಳು ಇರುವುದು ಕಂಡುಬಂದಿರುತ್ತದೆ. ಸದರಿ ಬಾಕ್ಸಗಳಲ್ಲಿ ಗೊವಾ ರಾಜ್ಯದಲ್ಲಿ ಮಾತ್ರ ಮಾರಾಟಕ್ಕಿರುವ ಮಧ್ಯದ ಬಾಟಲಿಗಳು ಅಂದರೆ ರಾಯಲ್ ಸ್ಟಾಗ್ ವಿಸ್ಕಿಯ 750 ಮಿಲಿಯ 48

ಬಾಟಲಿಗಳು, ಐ.ಬಿ. ವಿಸ್ಕಿಯ 750 ಮಿಲಿಯ 48 ಬಾಟಲಿಗಳು, ಎಂ.ಸಿ.ರಮ್ ವಿಸ್ಕಿಯ 750 ಮಿಲಿಯ 19 ಬಾಟಲಿಗಳು, ಕಿಂಗ್ ಫಿಶರ್ ಬಿಯರ್ ನ 500 ಮಿಲಿಯ 120 ಟಿನ್ ಗಳು ಹಾಗೂ 4 ಪ್ಲಾಸ್ಟಿಕ್ ಕ್ಯಾನುಗಳಲ್ಲಿ 35 ಲೀಟರನಷ್ಟು ಕಂಟ್ರಿ ಸಾರಾಯಿ ಇರುವುದು ಕಂಡುಬಂದಿರುತ್ತದೆ.

ನಂತರ ಚಾ.ಸಾ.1 ಸದರಿ ಮದ್ಯದ ಬಾಟಲಿಗಳನ್ನು ಹಾಗೂ ಸಾರಾಯಿಯನ್ನು ಎಲ್ಲಿಂದ ತರಲಾಗಿರುತ್ತದೆ ಮತ್ತು ಸಾಗಾಟ ಮಾಡಲು ಪರವಾನಿಗೆ ಬಗ್ಗೆ ವಿಚಾರಿಸಲಾಗಿ, ಸರಿಯಾಗಿ ಮಾಹಿತಿ ನೀಡದೇ ವಾಹನದ ಚಾಲಕ ಓಡಿ ಹೋಗಿರುತ್ತಾನೆ. ಹಿಡಿಯಲು ಪ್ರಯತ್ನಿಸಿದ್ದರೂ ಸಿಕ್ಕಿರುವುದಿಲ್ಲ. ನಂತರ ನನ್ನನ್ನು ಸದರಿ ವಾಹನದ ಬಳಿಯೇ ಕರ್ತವ್ಯಕ್ಕೆ ನೇಮಿಸಿ, ಚಾ.ಸಾ.1 ರವರು ಠಾಣೆಗೆ ವಾಪಸ್ಸಾಗಿ ಪಿ.ಎಸ್.ಐ.ರವರಿಗೆ ಮಾಹಿತಿ ತಿಳಿಸಿ ಪಂಚರನ್ನು ಕರೆದುಕೊಂಡು ಮದ್ಯಾಹ್ನ 2.00 ಗಂಟೆ ಸಮಯಕ್ಕೆ ಪಂಚರ ಜೊತೆ ಬಂದಿದ್ದು, ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಸದರಿ ಮದ್ಯದ ಬಾಟಲಿಗಳು ಹಾಗೂ ಸಾರಾಯಿ ಹಾಗೂ ವಾಹನವನ್ನು ಜಪ್ತುಪಡಿಸಿಕೊಂಡಿದ್ದು, ರಾಸಾಯನಿಕ ಪರೀಕ್ಷಾ ವರದಿಗಾಗಿ ಎಲ್ಲಾ ವಿವಿಧ ಮದ್ಯದ ಬಾಟಲಿಗಳಲ್ಲಿ ಒಂದು ಬಾಟಲಿ ಹಾಗೂ ಒಂದು ಲೀಟರನಷ್ಟು ಸಾರಾಯಿಯನ್ನು ಪ್ರತ್ಯೇಕವಾಗಿ ತೆಗೆದು ಸೀಲು ಮಾಡಿ ಅಮಾನತಪಡಿಸಿಕೊಂಡಿರುತ್ತಾರೆ. ನಂತರ ಜಪ್ತುಪಡಿಸಿದ ಮಾಲುಗಳನ್ನು ತನಿಖಾಧಿಕಾರಿ ತಮ್ಮ ವಶಕ್ಕೆ ಪಡೆದಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿದಾರರು ಈಗ ಸ್ಯಾಂಪಲ್ ಬಾಟಲಿಗಳು, ಟಿನ್ ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ರಿಂದ 5 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

(ಒಂದು ಮತ್ತು ಎರಡನೇ ಆರೋಪಿತರು ಗೈರುಹಾಜರಾಗಿದ್ದು ಅವರ ಗುರುತಿಸುವಿಕೆಯನ್ನು ತಕರಾರು ಮಾಡುವುದಿಲ್ಲವೆಂಬ ಷರತ್ತಿನ ಮೇರೆಗೆ ವಿನಾಯಿತಿ ಅರ್ಜಿಯನ್ನು ಪುರಸ್ಕರಿಸಲಾಗಿದೆ).

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್.ಎಂ.ಹೆಚ್. ವಕೀಲರಿಂದ</u>

ಆ ದಿನ ನನ್ನ ಕರ್ತವ್ಯದ ಅವಧಿ ಬೆಳಿಗ್ಗೆ 8.00 ರಿಂದ ಸಂಜೆ 8.00 ಗಂಟೆಯವರೆಗೆ ಇತ್ತು. ಗಸ್ತು ಮಾಡಬೇಕಾದರೆ ನಾನು ಹಾಗೂ ಚಾ.ಸಾ.1 ಇಬ್ಬರೇ ಇದ್ದೆವು. ಯಾರು ಮಾಹಿತಿ ನೀಡಿರುತ್ತಾರೆಂದು ನಾನೇನೂ ವಿಚಾರಿಸಿರುವುದಿಲ್ಲ. ನಾವು ನಿಂತಿದ್ದ ಜಾಗದಿಂದಲೇ ಅಪಘಾತಕ್ಕೀಡಾದ ವಾಹನ ದಾಟಿ ಹೋಗಬೇಕು ಎಂದರೆ ಸರಿ. ನಮ್ಮ ಕರ್ನಾಟಕದ ಗಡಿಯಲ್ಲಿ ಅಬಕಾರಿ ಇಲಾಖೆಯ ತನಿಖಾ ಠಾಣೆಯಿದ್ದು ಒಂದು ವೇಳೆ ಅಕ್ರಮ ಕಂಡುಬಂದರೆ ಅವರೇ ಜಪ್ತು ಮಾಡುತ್ತಾರೆಂದರೆ ಸರಿ. ನಮಗೆ ಮಾಹಿತಿ ಬಂದ ಸ್ಥಳದಿಂದ ಅಪಘಾತವಾದ ಸ್ಥಳಕ್ಕೆ ಸುಮಾರು

2 ಕಿ.ಮೀ. ಅಂತರ ಇರುತ್ತದೆ. ಅಪಘಾತವಾದ ಸ್ಥಳದಲ್ಲಿ ಸಾಕಷ್ಟು ವಾಸದ ಮನೆ ಇರುತ್ತದೆ ಎಂದರೆ ಸರಿ. ಹೈವೇ ಪಟ್ರೋಲಿಂಗ್ ವಾಹನದಲ್ಲಿಯೇ ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇವೆ. ನಾವು ವಾಹನವನ್ನು ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿ ಅಪಘಾತವಾದ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿರುತ್ತೇವೆ. ನಾವು ಸ್ಥಳದಲ್ಲಿ ನೋಡಿದಾಗ ವಾಹನದ ಚಾಲಕನಿಗೆ ತೆರಚಿದ ಗಾಯಗಳಾಗಿದ್ದವು. ಆರೋಪಿಗೆ ಚಿಕಿತ್ಸೆ ಕೊಡಿಸಲು ಪ್ರಯತ್ನ ಪಟ್ಟಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಅಷ್ಟರಲ್ಲಿ ಆತ ಓಡಿ ಹೋಗಿದ್ದ ಎಂದು ಉತ್ತರಿಸುತ್ತಾರೆ. ನಾವು ಸ್ಥಳದಲ್ಲಿ ಸುಮಾರು 5 ನಿಮಿಷಗಳವರೆಗೆ ಇದ್ದು ವಾಹನ ಪರಿಶೀಲನೆ ಮಾಡಿದ ತಕ್ಷಣವೇ ಆರೋಪಿ ಓಡಿ ಹೋಗಿರುತ್ತಾನೆ. ಆ ದಿನ ಸ್ಥಳದಲ್ಲಿ ಎಷ್ಟು ಜನ ಸಾರ್ವಜನಿಕರಿದ್ದರೆಂದು ಹೇಳಲು ಆಗುವುದಿಲ್ಲ. ಓಡಿ ಹೋಗುತ್ತಿದ್ದ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದ್ದರೂ ಆರೋಪಿ ಅರಣ್ಯ ಪ್ರದೇಶದಲ್ಲಿ ಓಡಿ ಹೋಗಿ ತಪ್ಪಿ ಸಿಕೊಂಡಿರುತ್ತಾರೆ. ಚಾ.ಸಾ.1 ರವರು ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ. ನನ್ನನ್ನು ಸ್ಥಳದಲ್ಲಿ ಕರ್ತವ್ಯಕ್ಕೆ ನೇಮಿಸಿ ಚಾ.ಸಾ.1 ರವರು ಠಾಣೆಗೆ ಹೋಗಿ ಪಂಚರನ್ನು ಕರೆದುಕೊಂಡುಬಂದಿರುತ್ತಾರೆ. ಪಂಚರನ್ನು ಕರೆದುಕೊಂಡು ಬಂದಾಗ 2.55 ಗಂಟೆಯಾಗಿತ್ತು.

ಜಪ್ತುಪಡಿಸಿಕೊಂಡ ಮದ್ಯದ ಬಾಟಲಿಗಳ ಮೇಲಿದ್ದ ತಯಾರಿಕಾ ವರ್ಷ, ಬ್ಯಾಚ್ ನಂಬರುಗಳನ್ನು ಹೇಳಲು ಆಗುವುದಿಲ್ಲ. ಅಂದಾಜಿನ ಮೇಲೆ ನಾಲ್ಕು ಕ್ಯಾನುಗಳಲ್ಲಿ 35 ಲೀಟರನಷ್ಟು ಸಾರಾಯಿ ಇತ್ತು ಎಂದು ಹೇಳುತ್ತಿದ್ದು, ಅದನ್ನೇನೂ ಅಳತೆ ಮಾಡಿರುವುದಿಲ್ಲ. ವಾಸನೇ ಬರುತ್ತಿದ್ದ ಕಾರಣ ಕಂಟ್ರಿ ಸಾರಾಯಿ ಎಂದು ತಿಳಿದುಬಂದಿರುತ್ತದೆ. ನಾನು ಹೇಳಿದ ಹಾಗೆ ಆರೋಪಿ ಯಾವುದೇ ಕಾಲದಲ್ಲಿಯೂ ಮದ್ಯದ ಬಾಟಲಿಗಳನ್ನು ಸ್ವಾ ಧೀನ ಹೊಂದಿ ಮಾರಾಟ ಮಾಡುತ್ತಿರಲಿಲ್ಲವೆದರೆ ಸರಿಯಲ್ಲ. ಆರೋಪಿಗೆ ಆ ದಿನ ಅಪಘಾತದಲ್ಲಿ ಗಾಯಗಳಾಗಿದ್ದು ಓಡಿ ಹೋಗುವ ಪರಿಸ್ಥಿತಿಯಲ್ಲಿರಲಿಲ್ಲವೆಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪುಮಾಡದಿದ್ದರೂ ಇಲಾಖಾ ಅಂಕಿ ಅಂಶಕ್ಕೋಸ್ಕರಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 5 ಕ್ಕೂ ಆರೋಪಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ನಮ್ಮ ಮೇಲಾಧಿಕಾರಿಗಳ ಮಾತುಕೇಳಿಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.